ಎಂದು ರೇಗಿ 'ಥೂ! ದರಿದ್ರ ಮುಂಡೆ' ಎಂದು ಅವಳ ಮನೆ ಬಾಗಿಲಿಗೆ ಉಗಿದು ಬಂದಿದ್ದ. ಹಾಲಿಗಾದರೂ ಸರಿಯೇ, ಮತ್ತೆ ಆ ಕಡೆ ತಲೆ ಹಾಕಲಿಲ್ಲ. ಈಗ ಅದನ್ನೆಲ್ಲಾ ಯೋಚಿಸುವಾಗ ದೈವತಂತ್ರ ಹೇಗೆ ಜೋನಿಗಾಗಿಯೇ ತನ್ನನ್ನು ಮೀಸಲಾಗಿ ಇಟ್ಟಿತ್ತೆಂದು ಕಲ್ಪಿಸಿಕೊಂಡು ಸೂರಿಯ ಮನಸ್ಸು ಅತೀವ ಹೆಮ್ಮೆ, ತೃಪ್ತಿಗಳಿಂದ ಬೀಗತೊಡಗಿತು.

ವಾರ ಬಿಟ್ಟು ಸೂರಿ ಸುಬ್ಬನನ್ನು ಕಾಣಲು ಹೋದ. ಸುಂಕದ ರಸೀತಿ ಪುಸ್ತಕಗಳ ಪಕ್ಕ ಒಂದು ಸುರುಳಿ ಅವನಿಗಾಗಿಯೇ ಕಾಯುತ್ತಿತ್ತು. ಅವನು ಕೊಟ್ಟಿದ್ದ ಸಣ್ಣ ಫೋಟೊವನ್ನು ಹಿಂದಿರುಗಿಸುತ್ತ ಸುಬ್ಬ ಕೇಳಿದ, 'ಸೂರಿ, ನಿಜ ಹೇಳು, ಇವಳು ಯಾರು?' 'ಅವತ್ತೇ ಹೇಳಿದೆನಲ್ಲೊ' ಅಂದ ಸೂರಿ. ಸುಬ್ಬ ಐದು ರೂಪಾಯಿಯ ಆಸೆಗೆ ತಾನು ಬಿಡಿಸಿದ ಚಿತ್ರದ ಸುರುಳಿ ಬಿಚ್ಚಿ ಸೂರಿಯ ಮುಂದೆ ಹಿಡಿದ. ಲಕ್ಷ್ಮೀ, ಸರಸ್ವತಿಯರಿಗೆ ಒಗ್ಗಿಹೋಗಿದ್ದ ಕೈ ಅವನದು. ಇಂತಹ ಆಧುನಿಕ ಚಿತ್ರ ಬಿಡಿಸಿ ಅಭ್ಯಾಸವಿಲ್ಲ. ಸುಬ್ಬುವಿನ ಚಿತ್ರದಲ್ಲಿ ಸೂರಿಯ ಹೃದಯ ದೇವತೆ 'ಹಂಟರ್ ವಾಲಿ', 'ಜಂಗಲ್ ಕ್ವೀನ್' ಪೋಸ್ಟರ್‌ಗಳಲ್ಲಿ ಯಾವಳೋ ಎರಡನೆ ದರ್ಜೆಯ ಬಾಂಬೆ ಫಿಲಂಸ್ಟಾರ್‌ನಂತೆ ಡಬ್ಬಾಗಿ ಕಾಣಿಸುತ್ತಿದ್ದಳು. ಸೂರಿಗೆ ಆಶಾ ಭಂಗವಾಯಿತು. ಅದೇ ಹೊತ್ತಿಗೆ ಸುಬ್ಬ ಉಪದೇಶಕ್ಕೆ ಶುರು ಮಾಡಿದ. 'ಸೂರಿ, ನೀನು ನನಗೆ ತುಂಬ ಬೇಕಾದವನು ಅಂತ ಹೇಳ್ತಿದೀನಿ. ಇವಳು ಯಾರು ಅಂತ ನನಗೆ ಗೊತ್ತು. ಅವತ್ತು ನಾನು ಬೆಳಗಿನ ಡ್ಯೂಟಿ ಮುಗಿಸಿ, ದುಡ್ಡು ಕಟ್ಟೋಕೆ ಕಚೇರಿ ಕಡೆ ಹೊರಟಿದ್ದಾಗ, ನೀನು ಯಾವೋಳ ಜತೆ ಗಾಡೀಲಿ ಪಕೋಡ ತಿನ್ನುತ್ತಾ ಲಲ್ಲೆ ಹೊಡೀತ ಹೋಗ್ತಿದ್ದೆಯೋ ಅವಳೇ ಇವಳು. ಈ ಬಿಳೀ ಚಕ್ಕಳದ ಈ ಪರಂಗಿಯೋರನ್ನ ಹಾಗೆಲ್ಲ ಹಚ್ಚಿಕೋಬೇಡ. ಮನೆ ಎಕ್ಕುಟ್ಟಿ ಹೋಗುತ್ತೆ. ಪರಂಗಿಯೋರಿಂದಲೇ ದೇಶ ಹಾಳಾಗಿರೋದು. ಅವರ ಹುಡುಗೀರೇನು ನಮ್ಮ ಊರು ನೋಡೋಕೆ ಬರ್‍ತಾರೆ ಅಂದುಕೊಂಡೆಯಾ? ನಮ್ಮನ್ನ ತಮ್ಮ ಕಪಿಮುಷ್ಟೀಲಿ ಸದಾ ಇಟ್ಕೊಳ್ಳೋಕೆ ಅಂತಾನೇ ಅವರಪ್ಪಂದಿರು ಅವರನ್ನ ಕಳಿಸ್ತಾರೆ. ಎಲ್ಲ ಸೂಳೇರು ಕಣೋ, ಸೂಳೇರು!' ಅಂತ ಒದರಿದ. ಕೇಳುತ್ತ ಹೋದಂತೆ ಸೂರಿಯ ರಕ್ತ ಕುದಿಯುತ್ತಿತ್ತು. ತನ್ನ ಗುಟ್ಟು ರಟ್ಟಾದದ್ದು, ತನ್ನ ಜೀವನ ದೇವತೆ ಜೋನಿಯನ್ನು ಸೂಳೆ ಅಂದದ್ದು ಸಾಲದೇ ಸುಬ್ಬು ಬೇಕೆಂದೇ ಚಿತ್ರವನ್ನು ಕುಲಗೆಡಿಸಿದ್ದಾನೆ ಅನ್ನಿಸಿತು. ಸುಬ್ಬ ತನಗಿಂತ ದೊಡ್ಡವನು ಎಂಬುದರ ಯೋಚನೆಯೂ ಇಲ್ಲದೆ ಛಳಾರನೆ ಅವನ ಕಪಾಳಕ್ಕೆರಡು ಬಾರಿಸಿ, ಚಿತ್ರವನ್ನು ಪರಪರ ಹರಿದು ಅವನ ಮುಖಕ್ಕೆಸೆದು ಅಲ್ಲಿ ನಿಲ್ಲದೇ ಬಂದುಬಿಟ್ಟ. ಬಿದ್ದ ಏಟು, ಆದ ಅವಮಾನಗಳಿಂದ ಸುಬ್ಬುವಿನ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. 'ನೀವುಗಳು ಈ ನಾಯಿಬುದ್ಧಿ ಬಿಡೋ ತನಕ ಈ ದೇಶ ಸ್ವತಂತ್ರವಾಗೋಲ್ಲ!' ಎನ್ನುತ್ತ, ಆಗ ತಾನೇ ಬಂದು ನಿಂತಿದ್ದ ಬೂದುಗುಂಬಳಕಾಯಿ ಗಾಡಿಗೆ ಸುಂಕದ ಚೀಟಿ ಅಂಟಿಸಲು ಹೊರಟ. ಸೂರಿ ಮನೆಗೆ ಬಂದವನೇ 'ಅಮ್ಮಾ, ಸ್ವಲ್ಪ ಕೆಲಸ ಇದೆ. ಮೈಸೂರಿಗೆ ಹೋಗಿ ರಾತ್ರಿ ಗಾಡೀಗೆ ಬರ್‍ತೀನಿ' ಎಂದವನೇ ಜೋನಿಯ ಚಿತ್ರದೊಂದಿಗೆ ಸ್ಟುಡಿಯೋ ಹುಡುಕಿ ಬರಲು ಹೊರಟುಬಿಟ್ಟ.

ಈ ನಡುವೆ ಗೌರಮ್ಮ ಕೊರಗುತ್ತಿದ್ದರು, ಕುಗ್ಗುತ್ತಿದ್ದರು. ಸುತ್ತ ಏನಾಗುತ್ತಿದೆ ಎಂಬುದರ ಪರಿವೆಯೇ ಇಲ್ಲದೆ ಸದಾ ಸೂರನ್ನೇ ನೋಡುತ್ತ ಕೂರುವರು. ಅಕ್ಕಿ ಆರಿಸಲೆಂದು ತೆಗೆದುಕೊಂಡ ಮೊರ ಕೈಯಲ್ಲೇ ಇರುತ್ತಿತ್ತು. ಹಾಲು ಉಕ್ಕಿದ್ದು, ಬೆಕ್ಕು ಕುಡಿದು ಹೋದದ್ದು ಒಂದೂ ಗೊತ್ತಾಗುತ್ತಿರಲಿಲ್ಲ. ಸೂರಿ ಒಮ್ಮೆ ತಮ್ಮ ಮಾಯಾಲೋಕದಿಂದ ಹೊರಬಂದು ತಾಯಿಯ ಕಡೆ ನೋಡಿದಾಗ ಅವನಿಗೆ ವಿಷಾದವಾಗದೇ ಇರಲಿಲ್ಲ. ಜೋನಿ ಬಂದ ಮೇಲೆ ತಾಯಿಯ ಕಡೆ ಗಮನ ಕೊಡುವುದಾಗಿಲ್ಲ. ಅವಳಿಗೇನೋ ನೋವಾಗಿದೆ ಅನ್ನಿಸಿತು. ಒಂದು ದಿನ ತಾನಾಗಿಯೇ ಅವಳ ಹತ್ತಿರ ಬಂದು ಕೂತು, ಪ್ರೀತಿಯಿಂದ ಮಾತಿಗೆ ಆರಂಭಿಸಿದ. 'ಅವತ್ತು ಏನೋ ಕೇಳೋಕೆ ಹೊರಟಿದ್ದೆಯಲ್ಲ, ಏನಮ್ಮಾ ಅದು?' ಅಂದ. ಗೌರಮ್ಮನವರಿಗೆ ಹೋದ ಜೀವ ಬಂದಂತಾಯಿತು. 'ಅದೇ ಅವತ್ತು ಮಧ್ಯಾಹ್ನ